ಸುನಿತಾ ಟಿಕೆಟ್ ಕಳಿಸಿದೊಡನೆ ವಿದೇಶ ಪ್ರವಾಸಕ್ಕೆ ದಂಪತಿ ಸಿದ್ಧರಾದರು. "ಬ್ಯಾಡ ಅಂದ್ರ ನಮ್ಮ ಸುನಿ ಬಿಡವಳ್ಳು. ಬರ್‍ರಿ ಅಂತ ಕೂತಬಿಟ್ಟಾಳ. ಟಿಕಿಟು ಕಳಿಸ್ಯಾಳ" ಎಂದು ಸಂಭ್ರಮದಿಂದ ಊರೆಲ್ಲ ಹೇಳಿಕೊಂಡು ತಿರುಗಿದರು ವೇದಾ. "ಪುಣ್ಯಾ ಮಾಡೀರಿ. ಹೋಗಿಬರ್‍ರಿ" ಎಂದ ಕಣ್ಣುಗಳಲ್ಲಿ ಸಂತಸ, ಅಸೂಯೆ. ಶ್ರೀಪಾದರು ತಮ್ಮ ಆತ್ಮೀಯರಾಗಿದ್ದ ಮಲ್ಹಾರಿ ಭಟ್ಟರಿಗೆ ದತ್ತಪ್ಪನ ಪೂಜಾ ಕೈಂಕರ್ಯವನ್ನು ಒಪ್ಪಿಸಿ ಅವರಿಂದ "ದಿನಾ ನಾನು, ನನ ಮಗಾ ಯಾರರೆ ಪೂಜಿ ಮಾಡ್ತೀವಿ. ಚಿಂತಿ ಬಿಡ್ರಿ" ವಾಗ್ದಾನ ಪಡೆದ ಮೇಲೆ ನಿಶ್ಚಿಂತರಾದರು. ಸುನಿತಾಳ ಸೂಚನೆಯಂತೆ ಬೆಚ್ಚನೆ ಬಟ್ಟೆಗಳು, ಸಾರಿನ ಪುಡಿ ಮುಂತಾದವುಗಳೂ ಸೇರಿ ಸೂಟ್‌ಕೇಸ್‌ಗಳು ಸಿದ್ಧವಾದವು. ಬೆಂಗಳೂರಿಗೆ ಬಂದ ನಂತರ ಅನಿತಾ ದಂಪತಿ ವೀಸಾ ಪಡೆಯುವಲ್ಲಿ, ಶಾಪಿಂಗ್‌ನಲ್ಲಿ ನೆರವಾದರು. ಭರದಿಂದ ಸಿದ್ಧತೆಗಳು ನಡೆಯುವಾಗಲೇ ಶ್ರೀಪಾದರು, "ಅನಿ, ನಿಮ್ಮ ತಮ್ಮಂದ್ರ್ಯಾರೂ ದತ್ತಪ್ಪನ್ನ ಇಟಗೊಳ್ಳಿಕ್ಕೆ ಒಪ್ಪಲಿಲ್ಲವಾ. ಸುನಿ ಅಂತೂ ಇಲ್ಲೆ ಬರ್ತಾಳೋ ಇಲ್ಲೋ... ಅದಕ್ಕ ದತ್ತಪ್ಪನ್ನ ನಿನಗ ಕೊಟ್ಟ ಬಿಡಬೇಕಂತ ಮಾಡೇವಿ. ನಿಮ್ಮನಿಯವ್ರು ಪೂಜಾ ಮಾಡೋ ಮುಂದ ದತ್ತಪ್ಪನ ತಲಿ ಮ್ಯಾಲೊಂದಿಷ್ಟು ನೀರು ಹಾಕಿದ್ರಾತು" ಎಂದು ಪೀಠಿಕೆ ಹಾಕಿದರು. ಎಲ್ಲಿ ಕೇಳಿಸಿಕೊಂಡನೋ ನಾಗೇಂದ್ರ, "ನನಗಾಗೂದಿಲ್ಲಾ. ನಮ್ಮ ದೇವರ ಬೇಕಾದಷ್ಟಿದ್ದಾರ. ಅಷ್ಟ ಮಾಡೋದ್ರಾಗ ಸಾಕಾಗೇದ" ಎಂದು ಬಿಟ್ಟ. ಅವನದು ನೇರ, ನಿಷ್ಠುರ ನುಡಿ. ಮುಂದೊಂದು, ಹಿಂದೊಂದು ಮಾತನಾಡಿ ಮತ್ತೆ ಹೊಂದಿಸಿಕೊಳ್ಳುವ ಪರಿ ಅವನಿಗಾಗದು. ಮತ್ತದೇ ಶಾಕ್ ಹೊಡೆದಂಥ ಪರಿಸ್ಥಿತಿ. ಅನಿತಾ ಕಣ್ಸನ್ನೆ ಮಾಡಿದಾಗ ದಂಪತಿ ಸುಮ್ಮನಾದರು.

ರಾತ್ರಿ ಇದ್ದ ಗೇಣು ಮನೆಯೊಳಗೆ ಗೋಡೆಯಾಚೆ ಅವರ ಮಾತು ಕೇಳಿಸುತ್ತಿತ್ತು. "ನಿಮ್ಮ ಸಾಲಾ ತೀರಿ ನಾವು ಮನಿ ಕಟ್ಟೋದು ಯಾವಾಗ? ಆಕಾಶನ ಶಿಕ್ಷಣಾನೂ ಆಗಬೇಕು. ತುಟ್ಟಿಕಾಲ. ಇದ್ದದ್ದೆಲ್ಲಾ ಕಳಕೊಂಡು ಕೂತೇವಿ. ತಿಂಗಳಾ ಹದಿನೈದು, ಇಪ್ಪತ್ತು ಸಾವಿರ ಬಾಡಿಗಿ ಕೊಟಗೋತ ಎಷ್ಟು ದಿವ್ಸ ಇರೋದು? ಗದಗದಾಗ ನಮ್ಮನಿ ಅಗದಿ ಛೊಲೊ ಏರಿಯಾದಾಗದ. ಏನಿಲ್ಲಂದ್ರೂ ಅರವತ್ತು ಲಕ್ಷ ಬಾಳ್ತದ. ಅದನ್ನ ಮಾರಿ ಇಲ್ಲೆ ಒಂದ ಫ್ಲ್ಯಾಟ್ ತೊಗೊಳ್ಳೋಣು. ನೀವು ನಮ್ಮ ದೇವ್ರ ಪೂಜಿ ಮಾಡೋಮುಂದ ನಮ್ಮಪ್ಪನ ದೇವ್ರ ತಲಿ ಮ್ಯಾಲಿಷ್ಟು ನೀರು ಹಾಕಿದ್ರ ನಿಮ್ಮ ಗಂಟೇನು ಹೋಗ್ತದ?..." ಎಂದು ಜೋರು ಮಾಡುತ್ತಿದ್ದಂತೆ ನಾಗೇಂದ್ರನ ಧ್ವನಿ ತಣ್ಣಗಾಗಿತ್ತು. ಮರುದಿನ ಅನಿತಾ, "ನೀವ ನೋಡಿದ್ರೆಲಾ, ನಮ್ಮನಿಯಾವ್ರಿಗೆ ಮನಸಿಲ್ಲಾ. ಆದ್ರ ನಾ ಹಿಂಗ ಹೇಳ್ತೇನಂತ ತಪ್ಪು ತಿಳಕೋಬ್ಯಾಡ್ರಿ. ಅಕ್ಕಗ ಇಲ್ಲೆ ಬರೋ ವಿಚಾರ ಇಲ್ಲಾ. ದೇವ್ರು, ಪೂಜಿ ಬೇಕಾಗಿಲ್ಲಾ. ಅದಕ್ಕ ಗದಗದಾಗಿನ ಮನಿ ನಮಗ ಕೊಡ್ರಿ. ನಾವು ದೇವ್ರಿಗಷ್ಟ ಅಲ್ಲ, ನಿಮಗೂ ಆಸರಾಗ್ತೇವಿ. ಅಂದ್ರ ನಮ್ಮ ಅತ್ತಿ, ಮಾವನೂ ಸುಮ್ಮ ಕೂಡತಾರ. ನಾವು ನಿಮ್ಮ ದೇವ್ರ ಜೋಡಿ ನಿಮ್ಮನ್ನೂ ನೋಡಕೋತೇವಿ" ಎಂದಳು. ಶ್ರೀಪಾದರ ಮುಖ ಚಿಕ್ಕದಾಯಿತು. 'ದೇವ್ರ ಪೂಜಾ ಮಾಡ್ಲಿಕ್ಕೆ ಲಂಚ ಕೊಡೋಹಂಗಾತಲಾ. ಇವ್ರಿಗೆ ಆಸ್ತಿ, ರೊಕ್ಕ ಬೇಕು. ಮಜಾ ಮಾಡ್ಲಿಕ್ಕೆ ಬೇಕು. ದೇವ್ರು, ದಿಂಡರು, ಪೂಜಿ ಅಷ್ಟ ಬ್ಯಾಡಾ. ನಮ್ಮ ಉಪಗಾರಕ್ಕ ಮಾಡಾವ್ರಗತೆ... ಭಾಳಾದ್ರ ಗುಡಿಗೆ ಹೋಗಿ ಪೂಜಿ ಮಾಡಿಸಿ ಪ್ರಸಾದ ತೊಗೊಂಡು ಬರ್ತಾರ. ಮನ್ಯಾಗ ಮಾಡೋದು ಅಂದ್ರ ಮೈಮ್ಯಾಲೆ ಬಂತು. ನನ್ನ ಮಕ್ಕಳೂ ಇದಕ್ಕ ಹೊರತಾಗ್ಲಿಲ್ಲ ದತ್ತಪ್ಪಾ. ಸ್ವಾರ್ಥಿಗಳಾದ್ರು. ಜಗತ್ತ ಹಿಂಗದ. ಏನ ಮಾಡ್ಲಿ?..." ಎಂದು ಮೌನವಾಗಿ ನಿವೇದಿಸಿಕೊಂಡು ನೊಂದುಕೊಂಡರು... ಆದರೆ ಮಗಳು ಹೇಳಿದ್ದನ್ನೇ ಮತ್ತೆ

